ತನ್ನನ್ನು ಎವೆಯಿಕ್ಕದೆ ನೋಡುತ್ತ ಕುಳಿತುಬಿಟ್ಟ ವೃದ್ಧ ದಂಪತಿಗೆ, ಜಾಧವ ಕೇಳಿದ– 'ಮುಂದಿನದನ್ನು ಊಹಿಸಬಲ್ಲಿರಷ್ಟೆ?'

ಧೋಂಡೂ– ಪಾರ್ವತಿ ಮತ್ತೆ ಡಾಯನಿಂಗ್ ಟೇಬಲ್ ಬಳಿ ಬಂದು ನಿಂತಿದ್ದರು. ಊಹೆ ಮಾಡುವ ಧೈರ್ಯವೇ ಇಲ್ಲದವರ ಹಾಗೆ ಪಾರಸೀ ದಂಪತಿ ಬಾಯಿ ತೆರೆಯದೆ ಕುಳಿತುಕೊಂಡಾಗ, ಧೋಂಡೂ ತನ್ನ ಕುತೂಹಲವನ್ನು ತಡೆದುಕೊಳ್ಳಲಾಗದೇ, ''ನಾನು ಹೇಳಲೆ? ಆ ಹುಡುಗ ಇವರ ಮಗನೇ ಆಗಿದ್ದ, ಆದರೆ ಡೊಂಬನು ಒಪ್ಪಲಿಲ್ಲ, ಮುಂದೆ ಜಗಳವಾಗಿ...'' ತನ್ನ ಊಹೆಯ ಬಗೆಗೆ ತನಗೇ ಅನುಮಾನ ಹುಟ್ಟಿ ಧೋಂಡೂ ತನ್ನ ವಾಕ್ಯವನ್ನು ಪೂರ್ಣಗೊಳಿಸದಾದ. ಒಗಟಿನಂಥ ಪ್ರಶ್ನೆ ಕೇಳಿದ ಜಾಧವ ಕೂಡ ಕೆಲ ಹೊತ್ತು ಮಾತನಾಡಲಿಲ್ಲ. ತಣ್ಣೀರಿನ ಗ್ಲಾಸನ್ನು ತುಟಿಗೆ ಹಚ್ಚಿ ಹನಿಹನಿಯಾಗಿ ನೀರು ಹೀರಹತ್ತಿದವನು ಧ್ಯಾನಮಗ್ನನಾದವನ ಹಾಗೆ ತೋರಿದಾಗ, ಫ್ರೇನಿಯೇ, ''ನೀನೇ ಹೇಳು ಬಬನ್'' ಎಂದಳು. ಹಾಗೂ ಧೋಂಡುಗೆ, ''ಈಗ ಬೇಕಾದರೆ ದೀಪ ಹಾಕು. ಈ ಮೂಲೆಯದಷ್ಟೇ ಹಾಕು''. ಧೋಂಡೂ ಹಾಗೇ ಮಾಡಿದ. ಜಾಧವನಿಗೂ ಈಗ ತನಗೆ ಹೇಳಬೇಕಾದ್ದನ್ನು ಹೇಳಲು ಸಾಧ್ಯವಾಗಿ ತೋರಿರಬೇಕು:

''ಹೌದು, ಅವನು ಮುದುಕನ ಮಗನೇ ಆಗಿರಬಹುದಾದರೂ ಯಾವ ಪ್ರತ್ಯಕ್ಷ ಪುರಾವೆಗಳೂ ಇರಲಿಲ್ಲ. ಹುಡುಗನ ವಯಸ್ಸು, ಗಲ್ಲದ ಮೇಲಿನ ಗುಳಿ ಇವು ಮಾತ್ರ ಇದ್ದರೂ ಇರಬಹುದೆಂಬ ಗುಮಾನಿಗೆ ಬೆಂಬಲ ನೀಡುವಂತಹವು. ಮುದುಕನ ಪರವಾದ ಇನ್ನೂ ಒಂದು ಮಾತು ಎಂದರೆ, ಮುದುಕ ಅನುಮಾನಿಸಿದ ಹಾಗೆ ಅವನು ಈ ಡೊಂಬನ ಮಗನಂತೂ ಆಗಿರಲಿಲ್ಲ. ಅವನು ತನ್ನ ಸತ್ತುಹೋದ ಅಣ್ಣನ ಮಗನೆಂದನಂತೆ! ತಾವು ಈ ಪ್ರಾಂತದವರೇ ಅಲ್ಲ ಎಂದನಂತೆ. ಆದರೆ ಹುಡುಗ ಮಾತ್ರ ಈ ಬದಿಯವನೇ ಆಗಿ ಕಾಣುತ್ತಿದ್ದ. ಆದರೆ ಇಷ್ಟರ ಮೇಲಿಂದಲೇ ಅವನು ರಾವ್‌ಜೀಭಾಯಿಯ ಮಗನೇ ಎಂದು ಅವನ ಬಾಜು ಹಿಡಿಯುವ ಉತ್ಸಾಹ ಅಲ್ಲಿ ನೆರೆದ ಯಾವನಿಗೂ ಇರಲಿಲ್ಲ. ಕೈಹಿಡಿದ ಹೆಂಡತಿ ಕೂಡ ಹೆಚ್ಚಿನ ಆಸ್ಥೆ ತೋರಿಸಲಿಲ್ಲ. ಮುಖ್ಯ ಕಾರಣ, ರಾವ್‌ಜೀಭಾಯಿ ಹಾದಿಯ ಮೇಲೆ ಹೋಗುವ ಹುಡುಗರಲ್ಲಿ ತನ್ನ ಮಗನನ್ನು ಕಂಡು ಗುಲ್ಲೆಬ್ಬಿಸಿದ್ದು ಇದೇ ಮೊದಲ ಸಾರೆ ಅಲ್ಲವಾಗಿತ್ತು! ಆದರೆ ರಾವ್‌ಜೀಭಾಯಿಯ ಈ ಬಾರಿಯ ವರ್ತನೆ ಮಾತ್ರ ಎಷ್ಟೊಂದು ವಿಕೋಪಕ್ಕೆ ಹೋಯಿತೆಂದರೆ ಕೊನೆಯಲ್ಲಿ ಪೊಲೀಸರನ್ನು ಕರೆ ಕಳುಹಿಸಬೇಕಾಯಿತಂತೆ. ಆದರೆ ಅವರು ಬರುವ ಮೊದಲೇ ಸನ್ನಿವೇಶ ತೀರ ನಾಟಕೀಯವಾದ ರೀತಿಯಲ್ಲೇ ಅಪಾಯ ದಾಟಿತ್ತು. ರಾವ್‌ಜೀಭಾಯಿ ಒಳಗಿನ ಕೋಣೆಗೆ

**ಕಣ್ಣ ಮುಂದೆಯೇ ಘಟಿಸಿದ ಸಾವನ್ನು ಕೂಡ ಒಂದು ದಿನ ಮರೆಯಬಹುದೇನೋ. ಆದರೆ ಎಲ್ಲೋ ಬದುಕಿ, ಇದ್ದೂ ಎಂಥ ಕಠಿಣ ಪರಿಸ್ಥಿತಿಯಲ್ಲಿ ಹೊಟ್ಟೆಯ ಮಗು ದಿನಗಳೆಯುತ್ತದೆಯೋ ಎಂದು ತಾವು ಬದುಕಿರುವವರೆಗೂ ತಿಳಿಯಲಾರದ ಪರಿಸ್ಥಿತಿ ಮಾತ್ರ ಮನಸ್ಸನ್ನು ಹುಚ್ಚಿನ ಅಂಚಿಗೆ ಒಯ್ದರೆ ಆಶ್ಚರ್ಯವಲ್ಲ!**